# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ.ಅಬ್ದುಲ್ ಬಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 582 |
| ಉತ್ತರಿಸಬೇಕಾದ ದಿನಾಂಕ | : | 11.07.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪ್ರಸ್ತುತ ಕೆ.ಎಂ.ಎಫ್.ನ ವಾರ್ಷಿಕ ವಹಿವಾಟು ಎಷ್ಟು ಕಳೆದ 2 ವರ್ಷಗಳಲ್ಲಿ ಕೆ.ಎಂ.ಎಫ್.ಗೆ ವಿವಿಧ ಉತ್ಪನ್ನಗಳ ಮಾರಾಟದಿಂದ ಬಂದಿರುವ ಆದಾಯ ಎಷ್ಟು; | ಕರ್ನಾಟಕ ಹಾಲು ಮಹಾಮಂಡಳದ ಕಳೆದ 2 ವರ್ಷಗಳ ವಹಿವಾಟು ಹಾಗೂ ಆದಾಯದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ | ಕೆ.ಎಂ.ಎಫ್.ನ ಯಾವ ಯಾವ ಉತ್ಪನ್ನಗಳನ್ನು ಯಾವ ಯಾವ ರಾಜ್ಯಗಳಿಗೆ ಎಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗುತ್ತಿದೆ; (ವಿವರ ನೀಡುವುದು) | ಕಹಾಮದಿಂದ ನಂದಿನಿ ಎಲ್ಲಾ ಶ್ರೇಣಿಯ ಉತ್ಪನ್ನಗಳನ್ನು ಭಾರತದಾದ್ಯಂತ 26 ರಾಜ್ಯಗಳಲ್ಲಿ ಮಾರಾಟ ಕೈಗೊಳ್ಳಲಾಗಿರುತ್ತದೆ, ಮಾರಾಟದ ಪ್ರಮಾಣದ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಇ | ಕೆ.ಎಂ.ಎಫ್.ನ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದಾದ್ಯಂತ ಜನನಿಬಿಡ ಪ್ರದೇಶಗಳಾದ ಸರ್ಕಾರಿ ಆಸ್ಪತ್ರೆ, ಬಸ್ ನಿಲ್ದಾಣ, ಉದ್ಯಾನವನ, ಸರ್ಕಾರಿ ಕಚೇರಿ ಆವರಣಗಳಲ್ಲಿ ನಂದಿನಿ ಪಾರ್ಲರ್ ನಿರ್ಮಾಣಕ್ಕೆ ಸ್ಥಳ ನೀಡಿ ನಂದಿನಿ ಉತ್ಪನ್ನಗಳ ಮಾರಾಟಕ್ಕೆ ಅನುವು ಮಾಡಿಕೊಡಲಾಗಿದೆ. |
| ಈ | ಹೊಸದಾಗಿ ಕೆ.ಎಂ.ಎಫ್.ನ ನಂದಿನಿ ಬೂತ್‌ಗಳನ್ನು ತೆರೆಯಲು ಇರುವ ನಿಯಮ ಹಾಗೂ ಮಾನದಂಡಗಳೇನು? | **ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕಾಗಿ ಪಾರ್ಲರ್‌ಗಳ ಸ್ಥಾಪನೆಯ ಮಾನದಂಡಗಳು:**<br>ನಂದಿನಿ ಪಾರ್ಲರ್‌ಗಳನ್ನು ಸೂಕ್ತ ಮತ್ತು ಹೆಚ್ಚು ಜನದಟ್ಟಣೆ ಇರುವಂತಹ ಬಿಬಿಎಂಪಿ ಪಾರ್ಕ್, ಬಿಡಿಎ, ಸಿಎ ಸ್ಥಳಗಳಲ್ಲಿ ಬಿಡಿಎ ಅಧೀನ ಸ್ಥಳಗಳಲ್ಲಿ, ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳು, ಶಾಲಾ- ಕಾಲೇಜು ಅವರಣಗಳು, ಸರ್ಕಾರಿ/ ಅರೆ ಸರ್ಕಾರಿ ಸ್ಥಳಗಳು, ಆರೋಗ್ಯ ಕೇಂದ್ರ, ಐಟಿಬಿಟಿ ಸಂಸ್ಥೆಗಳು, ಬೃಹತ್ ಅಪಾರ್ಟ್‌ಮೆಂಟ್‌ಗಳ ಆವರಣಗಳು ಹಾಗೂ ಇತರೆ ಸೂಕ್ತ ಸ್ಥಳಗಳಲ್ಲಿ ಪ್ರಾರಂಭಿಸಬಹುದಾಗಿದೆ. |

| | | |
|---|---|---|
| | | **ಪಾರ್ಲರ್ ನಿರ್ವಹಣೆದಾರರ ಗುರುತಿಸುವಿಕೆ:**<br><br>ಯಾವುದೇ ಮತ, ಪಂಗಡ ವಿದ್ಯಾರ್ಹತೆಗಳ ಬಗ್ಗೆ ತಾರತಮ್ಯ ಮಾಡದೇ ಕೇವಲ ವ್ಯಕ್ತಿಯ ಆಸಕ್ತಿ ಮೇರೆಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಮಹಾಮಂಡಳ/ಒಕ್ಕೂಟದ ಕಾರ್ಯನಿರ್ವಾಹಕರ ಅನುಮೋದನೆಯಂತೆ ಪಾರ್ಲರ್ ಹಂಚಿಕೆ ಮಾಡಲಾಗುವುದು.<br><br>• ಪಾರ್ಲರ್ ಹೊಂದಲು ಬಯಸುವ ವ್ಯಕ್ತಿ (ಪುರುಷ/ಮಹಿಳೆ) ಡೇರಿ ವ್ಯವಹಾರದಲ್ಲಿ ಆಸಕ್ತಿ ಹೊಂದಿ ಸಂಪೂರ್ಣ 24/7 ಕಾರ್ಯನಿರ್ವಹಿಸುವಂತಿರಬೇಕು.<br>• ಪಾರ್ಲರ್ ಹೊಂದಲು ಬಯಸುವ ವ್ಯಕ್ತಿಯು ದೈನಂದಿನ ವಹಿವಾಟಿಗೆ ಹಣ ಹೂಡಿಕೆ ಮಾಡಲು ಶಕ್ತನಾಗಿರಬೇಕು.<br>• ಪಾರ್ಲರ್ ಹೊಂದಲು ಬಯಸುವ ವ್ಯಕ್ತಿಯು ಸ್ಥಳ ಗುರುತಿಸಿ ಸಂಬಂಧ ಪಟ್ಟ ಇಲಾಖೆ ಅಥವಾ ಸಂಸ್ಥೆಯಿಂದ ಸ್ಥಳ ಹಂಚಿಕೆ/ಮಂಜೂರಾತಿ ಪತ್ರವನ್ನು ಕಹಾಮಗೆ ಸಲ್ಲಿಸಿದ್ದಲ್ಲಿ, ಕಹಾಮದಿಂದ ಎನ್.ಓ.ಸಿ ನೀಡಿ ಸಂಬಂಧಪಟ್ಟ ಜಿಲ್ಲಾ ಹಾಲು ಒಕ್ಕೂಟಗಳಿಂದ ಹಾಲು ಮತ್ತು ಉತ್ಪನ್ನಗಳ ಮಾರಾಟದ ರೀಟೇಲ್ ಗಾರಿಕೆಯನ್ನು ನೀಡಲಾಗುವುದು.<br>• ಸಾಮಾನ್ಯವಾಗಿ ನಂದಿನಿ ಪಾರ್ಲರ್‌ನ್ನು ಪ್ರಾರಂಭಿಸಲು ಕನಿಷ್ಠ 8*10 ಅಡಿ, 10*10 ಅಥವಾ 20*10 ಅಡಿ (ಅಧಿಕ ಸ್ಥಳ ಲಭ್ಯತವಿದ್ದಲ್ಲಿ) ಸ್ಥಳ ಅವಶ್ಯವಿರುತ್ತದೆ.<br>• ಹೊಸದಾಗಿ ಪ್ರಾರಂಭಿಸುವ ನಂದಿನಿ ಪಾರ್ಲರ್‌ಗಳಿಗೆ ಕಹಾಮ/ಒಕ್ಕೂಟದಿಂದ ಆಕರ್ಷಕವಾಗಿ ಏಕರೂಪ ಬ್ರ್ಯಾಂಡಿಂಗ್ ಮಾಡಿಸಿ ಕೊಡಲಾಗುವುದು, ಕೂಲರ್/ ಡೀಫ್-ಫ್ರೀಜರ್‌ಗಳನ್ನು ಶೇಕಡ 50 ರಷ್ಟು ರಿಯಾಯಿತಿ ದರಗಳಲ್ಲಿ ಕಹಾಮ/ ಒಕ್ಕೂಟಗಳಿಂದ ಸರಬರಾಜು ಮಾಡಲಾಗುವುದು.<br>• ಉಳಿದ ಸಂಬಂಧಪಟ್ಟ ವ್ಯಕ್ತಿಯೇ ಪಾರ್ಲರ್ ನಿರ್ಮಾಣ, ಉತ್ಪನ್ನಗಳ ದಾಸ್ತಾನು ಮೊತ್ತ, ರೀಟೇಲ್‌ಗಾರಿಕೆ ಪಡೆಯಲು ಭದ್ರತಾ ಠೇವಣಿ (ಮರು ಪಾವತಿಸುವ ಮೊತ್ತ) ಭರಿಸಬೇಕಾಗಿರುತ್ತದೆ. |

| | | |
|---|---|---|
| | | • ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆ ಮತ್ತು ಇತರೆ ಸಂಸ್ಥೆಗಳಿಂದ ಹೊಸದಾಗಿ ಪಾರ್ಲರ್ ಸ್ಥಾಪನೆಗೆ ಸ್ಥಳ, ಬಾಡಿಗೆ ಹಾಗೂ ಅವಧಿಯನ್ನು ಜಂಟಿಯಾಗಿ ಕರಾರು ಒಪ್ಪಂದವನ್ನು ಮಾಡಲಾಗುವುದು.<br>• ಪಾರ್ಲರ್ ನಿರ್ವಹಣೆಗಾರಿಕೆಯನ್ನು ವ್ಯಕ್ತಿಗೆ 2 ವರ್ಷದ ಅವಧಿಗೆ ಕರಾರು ಒಂಪ್ಪದ ಮಾಡಲಾಗುವುದು ಹಾಗೂ ತದನಂತರ ಅವರುಗಳ ನಿರ್ವಹಣೆ ಉತ್ತಮವಾಗಿದಲ್ಲಿ ನಿರ್ವಹಣೆಗಾರಿಕೆಯ ಅವಧಿಯನ್ನು ವಿಸ್ತರಿಸಲಾಗುವುದು.<br><br>**<u>ನಂದಿನಿ ಪಾರ್ಲರ್ ಸ್ಥಾಪನೆಯ ಉದ್ದೇಶಗಳು.</u>**<br><br>ಸಕಾಲದಲ್ಲಿ ಗ್ರಾಹಕರಿಗೆ ಉತ್ತಮ ಗುಣಮಟ್ಟದ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಎಲ್ಲಾ ಶ್ರೇಣಿಗಳನ್ನು ಸ್ಪರ್ಧಾತ್ಮಕ ದರದಲ್ಲಿ ಲಭ್ಯ ಮಾಡುವುದರೊಂದಿಗೆ ನಂದಿನಿ ಉತ್ಪನ್ನಗಳ ವಹಿವಾಟನ್ನು ವಿಸ್ತರಣೆಗೆ ಅವಕಾಶ ಕಲ್ಪಿಸುವುದು.<br><br>• ಸದಾ ಕಾಲ ಗ್ರಾಹಕರಿಗೆ ಗುಣಮಟ್ಟದ ಉತ್ಪನ್ನಗಳು ಲಭ್ಯವಾಗುವಂತೆ ಮಾಡುವುದು.<br>• ನಿರುದ್ಯೋಗ ಮಹಿಳೆ/ ಪುರುಷ/ ವಿಕಲ ಚೇತನರು/ ಹಿರಿಯ ನಾಗರಿಕರಿಗೆ ಉದ್ಯೋಗ ಕಲ್ಪಿಸುವುದು.<br>• ಪರಿವರ್ತನೆಯಾಗುವ ಹೆಚ್ಚುವರಿ ಹಾಲನ್ನು ದ್ರವ ರೂಪದಲ್ಲೇ ಮಾರಾಟಕ್ಕೆ ಕ್ರಮವಿಟ್ಟು ರೈತರಿಗೆ ಉತ್ತಮ ದರವನ್ನು ನೀಡುವುದು.<br>• ನಿರುದ್ಯೋಗ ಮಹಿಳೆ/ ಪುರುಷ ಸ್ವಯಂ ಉದ್ಯೋಗ ಕಲ್ಪಿಸಿ ಆರ್ಥಿಕ ಸಧೃಡವಾಗುವಂತೆ ಮಾಡುವುದು. |

**ಇ- ಪಸಂಮೀ 127 ಸಲೆವಿ 2023**

**(ಕೆ.ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**